ಪತ್ರಿಕೆಗಳಲ್ಲಿ ಸ್ಪೇಸ್ ಸಿಕ್ಕಿಲ್ಲ. ಕೊರೋನಾ ನಂತರವಂತೂ ಅದು ಸಂಪೂರ್ಣ ಮರೆಯಾಗಿದೆ. ಪತ್ರಿಕೆಯ ಓದೇ ಸಾಹಿತ್ಯ ಪ್ರೀತಿಗೆ ಮಾನದಂಡವಲ್ಲ. ಹಾಗೆಂದು ನಮ್ಮಲ್ಲಿ ಓದುವವರು ಇಲ್ಲವೆಂದಲ್ಲ. ಆದರೆ, ಓದುವವರ ಸಂಖ್ಯೆಗಿಂತ ಬರೆಯುವವರ ಸಂಖ್ಯೆಯೇ ದೊಡ್ಡದಿದೆ. ಇದರ ಮಧ್ಯೆಯೂ ಬಾಲ್ಯಕಾಲದ ಮೇಲೆ ಪ್ರೀತಿ ಉಳಿಸಿಕೊಂಡಿರುವ ಮಕ್ಕಳ ಸಾಹಿತ್ಯ ಓದುಗರು ಅಲ್ಲಲ್ಲಿ ಇದ್ದಾರೆ. ಅದೇ ಆಶಾಕಿರಣ.

◆ **ನಿಮ್ಮ ಮೇಲೆ ಯಾವ ಕೃತಿಗಳು ಪ್ರಭಾವ ಬೀರಿವೆ? ಏಕೆ?**

ನನ್ನ ಇಂದಿನ ಬರವಣಿಗೆ, ಓದು, ಸಂಶೋಧನೆ ಎಲ್ಲದಕ್ಕೂ ಆನಂದ ಪಾಟೀಲರೇ ಪ್ರೇರಣೆ. ಅವರ ಬರವಣಿಗೆಯ ಶೈಲಿ ನನಗಿಷ್ಟ. ಅದರಲ್ಲೂ ಅವರ 'ಎದ್ದು ನಿಂತ ಬಾಲ', 'ಪುಟ್ಟಾರಿ ಆನೆ ಪುಟ್‌ಪುಟ್' ನನ್ನನ್ನು ತುಂಬಾ ಸೆಳೆದಂಥ ಕೃತಿಗಳು. ಹಾಗೆಯೇ ಸ್ವೀಡನ್ನಿನ ಜುಜ್ಞಾ ವೈಸ್‌ಲ್ಯಾಂಡರ್ ಸೃಷ್ಟಿಸಿದ 'ಮಮ್ಮಮೂ' ಸರಣಿ ಕಥೆಗಳು, ಸ್ಕಾಟ್ಲೆಂಡ್‌ನ ಜೆ.ಎಂ. ಬೆರ್‍ರಿಯ 'ಪೀಟರ್‌ಪ್ಯಾನ್', ಇಂಗ್ಲೆಂಡ್‌ನ ಎ.ಎ. ಮಿಲ್ನೆಯ 'ವಿನ್ನಿ ದ ಪೂಹ', ಭಾರತದ ಪ್ರಸಿದ್ಧ ಇಂಗ್ಲಿಷ್ ಕಥೆಗಾರ ರಾಮೇಂದ್ರ ಕುಮಾರ ಅವರ ಕಥೆಗಳು, ಕುವೆಂಪು ಅವರ 'ಕಿಂದರಿಜೋಗಿ', ಭೂಸನೂರಮಠ ಅವರ ಸೈನ್ಸ್ ಫಿಕ್ಷನ್ ಕಥೆಗಳು, ಬಿಳಿಗೆರೆ ಕೃಷ್ಣಮೂರ್ತಿ ಅವರ 'ಚಗಚೆ ಹೂವಿನ ಹುಡುಗಿ', 'ಭೂಮಿಯೊಂದು ಮಹಾಬೀಜ', ತಮ್ಮಣ್ಣ ಬೀಗಾರರ 'ಅಮ್ಮನ ಚಿತ್ರ', ಭಾಗೀರಥಿ ಹೆಗಡೆ ಅವರ 'ಗುಬ್ಬಿ ಪದ್ಯಗಳು', ಮತ್ತೂರು ಸುಬ್ಬಣ್ಣ ಅವರ 'ಮುತ್ತಳ್ಳಿಗೆ ಸೇತುವೆ ಬಂತು', ನಾ. ಡಿಸೋಜ ಅವರ 'ಹಕ್ಕಿಗೊಂದು ಗೂಡು ಕೊಡಿ' – ಹೀಗೆ ನನ್ನನ್ನು, ನನ್ನ ಬರವಣಿಗೆಯನ್ನು ಸಾಣೆ ಹಿಡಿದ ಪರಂಪರೆಯ, ವರ್ತಮಾನದ ಕೃತಿಗಳು ತುಂಬಾ ಇವೆ.

◆ **ಹೊಸ ತಲೆಮಾರಿನ ಬರಹಗಾರರು ಮಕ್ಕಳ ಸಾಹಿತ್ಯದೆಡೆ ನಿರಾಸಕ್ತಿಯನ್ನು ತೋರಿಸಲು, ನೀವು ಕಂಡುಕೊಂಡ ಕಾರಣಗಳೇನು?**

ಈ ಕಾಲಘಟ್ಟದಲ್ಲಿ ಯಾರಿಗೇ ಆದರೂ ಸದ್ಯದ ಅನುಭವವನ್ನು ದಾಖಲಿಸುವುದು ಬಹಳ ಸುಲಭ. ಆದರೆ ಎಂದೋ ಆಗಿಹೋದ, ಕಳೆದುಹೋದ ಬಾಲ್ಯವನ್ನು ನೆನಪಿಸಿಕೊಳ್ಳಲು ಬಹಳ ಜನರಿಗೆ ಇಷ್ಟವಿರುವುದಿಲ್ಲ. ಮತ್ತೊಂದು, ನಮ್ಮ ಬಾಲ್ಯಕಾಲದ ಅನುಭವ, ಭಾಷೆ, ನಿರೂಪಣೆ ಬಗ್ಗೆ ಕೆಲವರಿಗೆ ಕೀಳರಿಮೆ ಇರುವುದರಿಂದ ಮಕ್ಕಳ ಸಾಹಿತ್ಯದ ಕಡೆ ಹೊರಳುತ್ತಿಲ್ಲವೆನಿಸಿದೆ. ಇಲ್ಲಿ ತುಂಬಾ ಸ್ಪೇಸ್ ಇದ್ದರೂ ಗುರುತಿಸಿಕೊಳ್ಳುವಿಕೆ ಬಹಳ ನಿಧಾನ. ಮುಖ್ಯಧಾರೆಯ ವಿಮರ್ಶಕರಿಗೆ ಈ ಕ್ಷೇತ್ರದ ಕಡೆ ಆಸಕ್ತಿ ಇಲ್ಲ. ಆಗ ಹೊಸ ತಲೆಮಾರಿನವರಿಗೆ ಅವರ ಐಡೆಂಟಿಟಿ ಕ್ರೈಸಿಸ್ ಉಂಟಾಗುತ್ತದೆ. ಹಾಗಾಗಿ ಈ ಕಡೆ ಮುಖ ಮಾಡುವುದಿಲ್ಲ. ಮತ್ತೊಂದು ಮುಖ್ಯವಾದುದು, ಈಗಾಗಲೇ ಮಕ್ಕಳ ಸಾಹಿತ್ಯ ಬರೆಯುತ್ತಿರುವ ಅನೇಕರ ಬರಹಗಳು ಹೊಸಬರನ್ನು ಪ್ರೇರೇಪಣೆ ಮಾಡುವ ಮಾದರಿ ಎನ್ನುವಂತಿಲ್ಲ. ಎಲ್ಲದಕ್ಕಿಂತ ಮುಖ್ಯವಾಗಿ ಚೈಲ್ಡ್‌ಹುಡ್ ಉಳಿಸಿಕೊಂಡಿರುವ, ಮಗುತನದ ಮನಸ್ಸುಳ್ಳವರ ಸಂಖ್ಯೆಯೇ ಕಡಿಮೆ ಇದೆ, ಏನು ಮಾಡೋದು?

◆ **ಮಕ್ಕಳ ಸಾಹಿತ್ಯವನ್ನು ಇಂದಿನ ವಿಮರ್ಶಾ ಲೋಕ ಯಾವ ಬಗೆಯಲ್ಲಿ ಸ್ವೀಕರಿಸುತ್ತಿದೆ?**

ಈ ಪ್ರಕಾರವನ್ನು ನಮ್ಮಲ್ಲಿ ಒಂದು ಗಂಭೀರ ಪ್ರಕಾರವೆಂದು ಭಾವಿಸಿಯೇ ಇಲ್ಲ. ಕೇವಲ ಪ್ರಶಸ್ತಿ ಕೊಡುವ ಸಂದರ್ಭದಲ್ಲಿ, ಸಮ್ಮೇಳನದ ಗೋಷ್ಠಿ ಆಯೋಜನೆಗಳಲ್ಲಿ ಇದೊಂದೂ ಇರಲಿ ಎನ್ನುವ ಭಾವನೆ ಇದೆಯಷ್ಟೇ. ಹಾಗೆ ನೋಡಿದರೆ ಸೃಜನಶೀಲ ಲೇಖಕರಾದ ಪ್ರತಿಯೊಬ್ಬರಲ್ಲೂ ಮಕ್ಕಳಲ್ಲಿರುವ ಇನ್ನೋಸೆನ್ಸ್ ಇದ್ದೇ ಇರುತ್ತದೆ. ಆದರೆ, ಅದನ್ನು ಬಾಲಿಶವೆಂದು ಭಾವಿಸಿದವರು ಮಕ್ಕಳ ಸಾಹಿತ್ಯ ರಚನೆ ಮಾಡುವುದಿಲ್ಲ, ವಿಮರ್ಶೆಯೂ ಕೂಡ. ●